# ಸುದ್ದಿ ವಾಚನವೂ ಸಿನಿಮಾ ಸಖ್ಯವೂ

**ಸುದ್ದಿ ನಿರೂಪಕಿಯಾಗಿದ್ದ ಮಲೆನಾಡಿನ ಹುಡುಗಿ ಅಂಕಿತಾ ಗೌಡ ಧಾರಾವಾಹಿಗೂ ಬಣ್ಣ ಹಚ್ಚಿದವರು. ಹಲವು ಸಿನಿಮಾಗಳಲ್ಲಿ ಕಾಣಿಸಿಕೊಂಡಿರುವ ಅವರೀಗ ಭಕ್ತಿಪ್ರಧಾನ ಸಿನಿಮಾವೊಂದರ ಮುಖ್ಯಪಾತ್ರಕ್ಕೆ ಅಣಿಯಾಗುತ್ತಿದ್ದಾರೆ.**

**ಸುಮಲತಾ ಎನ್**



ಬೆಂಗಳೂರಿನಲ್ಲಿ ಕಾರ್ಪೊರೇಟ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಅಂಕಿತಾ ಗೌಡ ಅವರಿಗೆ, ಸುದ್ದಿ ನಿರೂಪಕಿಯಾಗುವ ಅವಕಾಶ ಬಂದದ್ದು ತೀರಾ ಅನಿರೀಕ್ಷಿತವಾಗಿ. ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಟೂರಿಸಂ ಅಡ್ಮಿನಿಸ್ಟ್ರೇಷನ್ ವಿತ್ ಏರ್‌ಲೈನ್ಸ್ ಮ್ಯಾನೇಜ್ಮೆಂಟ್ ಎಂಬ ವಿಷಯದಲ್ಲಿ ಪದವಿ ಪಡೆದಿದ್ದ ಅವರಿಗೆ ಪತ್ರಿಕೋದ್ಯಮ ಅಪರಿಚಿತವೇ ಆಗಿತ್ತು.

ಆದರೆ ಹೊಸ ಸುದ್ದಿ ಮಾಧ್ಯಮವೊಂದಕ್ಕೆ ನಿರೂಪಕಿಯಾಗುವ ಕರೆ ಬಂದಿದ್ದು ಅವರಲ್ಲಿ, ಬದುಕಿಗೆ ಹೊಸ ದಿಕ್ಕು ತೆರೆದ ಉತ್ಸಾಹ ತಂದುಕೊಟ್ಟಿತ್ತು. ಪತ್ರಿಕೋದ್ಯಮದ ಬಗ್ಗೆ ಏನೂ ತಿಳಿದಿಲ್ಲವೆಂದು ಹಿಂಜರಿಕೆಯಲ್ಲಿದ್ದರೂ ಗಟ್ಟಿ ಮನಸ್ಸು ಮಾಡಿ ಈ ಕ್ಷೇತ್ರಕ್ಕೆ ಕಾಲಿಟ್ಟ ಅವರೀಗ ಹಲವು ಸಾಧ್ಯತೆಗಳಲ್ಲಿ ತೊಡಗಿಕೊಂಡಿದ್ದಾರೆ. ಪತ್ರಿಕೋದ್ಯಮದಿಂದ ಸಿನಿಮಾ ನಂಟು ಬೆಳೆಸಿಕೊಂಡು ಕಲಾವಿದೆಯಾಗಿ ತಮ್ಮ ಗುರುತು ಮೂಡಿಸುವ ತವಕದಲ್ಲಿದ್ದಾರೆ.

‘ನನ್ನ ಅಮ್ಮನ ಊರು ತೀರ್ಥಹಳ್ಳಿ. ಅಪ್ಪನದು ಚಿಕ್ಕಮಗಳೂರಿನ ಕೆಂಚಿಕೊಪ್ಪ. ಕನ್ನಡ ಭಾಷೆ ಮೇಲೆ ನನಗಿದ್ದ ಹಿಡಿತವನ್ನು ಕಂಡಿದ್ದ ಪರಿಚಿತರೊಬ್ಬರು ಸುದ್ದಿ ಮಾಧ್ಯಮಕ್ಕೆ ನಿರೂಪಕಿಯಾಗುವ ಶಿಫಾರಸು ಮುಂದಿಟ್ಟರು. ಅದನ್ನು ನಿರಾಕರಿಸಲು ಸಾಧ್ಯವಾಗಲಿಲ್ಲ. ಸುದ್ದಿ ನಿರೂಪಕಿ ಎಂದ ಮೇಲೆ ಆ ಕ್ಷೇತ್ರದ ಬಗ್ಗೆ ಸಂಪೂರ್ಣ ತಿಳಿದುಕೊಳ್ಳುವುದು ಮುಖ್ಯ ಎಂದರಿತ ನಾನು ಬರವಣಿಗೆ, ಸುದ್ದಿ ಪ್ಯಾಕೇಜ್, ನಿರೂಪಣೆ ಒಳಗೊಂಡಂತೆ ಟೀವಿ ಮಾಧ್ಯಮದ ತಾಂತ್ರಿಕ ವಿಷಯಗಳನ್ನು ಎಂಟು ತಿಂಗಳ ತರಬೇತಿಯಲ್ಲಿ ಕಲಿತೆ. ಸುಮಾರು ಏಳು ವರ್ಷಗಳ ಕಾಲ ಸುದ್ದಿ ನಿರೂಪಕಿಯಾಗಿ ಕೆಲಸ ಮಾಡಿದೆ’ ಎಂದು ತಮ್ಮ ಹಿನ್ನೆಲೆಯನ್ನು ಪರಿಚಯಿಸುತ್ತಾರೆ ಅಂಕಿತಾ.

ಕಾಲೇಜಿನಲ್ಲಿರುವಾಗಲೇ ಧಾರಾವಾಹಿಯಲ್ಲಿ ಪುಟ್ಟ ಪಾತ್ರ ನಿಭಾಯಿಸಿದ್ದ ಅಂಕಿತಾ ಅವರಿಗೆ ನಟನೆ ಎಂಬುದು ಮನದ ತೆರೆಮರೆಯಲ್ಲೇ ಉಳಿದಿದ್ದ ಸಂಗತಿಯಾಗಿತ್ತು. ಇದೀಗ ಮತ್ತೆ ಅತ್ತ ತಮ್ಮ ಚಿತ್ತ ಹೊರಳಿಸಿದ್ದಾರೆ.

‘‘ಕಾಲೇಜಿಗೆ ಹೋಗುವಾಗ ವಿನು ಬಳಂಜ ಅವರ ‘ನಿನ್ನೊಲುಮೆಯಿಂದಲೇ’ ಎಂಬ ಧಾರಾವಾಹಿಯಲ್ಲಿ ಅನಾಥೆಯೊಬ್ಬಳ ಪಾತ್ರ ಮಾಡಿದ್ದೆ. ನಾನು ಮೊದಲು ಕ್ಯಾಮೆರಾ ಎದುರಿಸಿದ್ದು ಅಲ್ಲಿಯೇ. ಶಿಕ್ಷಣ ಮುಗಿದ ಮೇಲೆ ಅತ್ತ ಯೋಚಿಸಿರಲಿಲ್ಲ. ಆಮೇಲೆ ನಿರೂಪಕಿಯಾದೆ. ನಟನೆಯತ್ತ ಮನಸ್ಸಿದ್ದರೂ ಪತ್ರಿಕೋದ್ಯಮದಲ್ಲೂ ಒಲವಿದ್ದುದರಿಂದ ಗೊಂದಲದಲ್ಲೇ ಇದ್ದೆ. ಆ ಸಂದರ್ಭದಲ್ಲೇ ಮತ್ತೊಂದು ಧಾರಾವಾಹಿ ಅವಕಾಶ ಬಂದಿತ್ತು. ‘ಅನುಬಂಧ’ ಧಾರಾವಾಹಿಯಲ್ಲಿ ಮತ್ತೆ ಬಣ್ಣ ಹಚ್ಚಿದೆ. ಮಗದೊಮ್ಮೆ ನಿರೂಪಣೆಯತ್ತ ಹೊರಳಿದೆ’’ ಎಂದು ತಮ್ಮ ಬಣ್ಣದ ನಂಟಿನ ಕುರಿತು ಮಾತನಾಡುತ್ತಾರೆ.

ಸುದ್ದಿ ನಿರೂಪಣೆ ನಡುವೆಯೇ ಸಿನಿಮಾಗಳಲ್ಲಿ ನಟಿಸುವ ಅವಕಾಶವೂ ಸಿಕ್ಕಿತು. ಹತ್ತಾರು ಸಿನಿಮಾಗಳಲ್ಲಿ ಚಿಕ್ಕ ಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡರು. ಕೆಲವು ಸಿನಿಮಾಗಳಲ್ಲಿ ಜರ್ನಲಿಸ್ಟ್ ಪಾತ್ರಗಳಿಗೆಂದೇ ತಮ್ಮನ್ನು ಆಹ್ವಾನಿಸಿದ್ದು ಅಂಕಿತಾ ಅವರಿಗೆ ವಿಶೇಷ ಅನುಭವ ಕೊಟ್ಟಿತ್ತು. ‘ಅಳಿದು ಉಳಿದವರು’ ಎಂಬ ಸಿನಿಮಾದಲ್ಲಿ ಹೆಚ್ಚು ಸ್ಕ್ರೀನ್‌ಟೈಂನಲ್ಲಿ ಕಾಣಿಸಿಕೊಂಡರು. ಈಚೆಗೆ ‘ಪದವಿಪೂರ್ವ’ ಹಾಗೂ ‘ಶಿವಾಜಿ ಸುರತ್ಕಲ್’ ಸಿನಿಮಾಗಳಲ್ಲಿಯೂ ನಟಿಸಿದ್ದಾರೆ.

ಇದರೊಂದಿಗೆ ಹಲವು ಕಾರ್ಯಕ್ರಮಗಳ ನಿರೂಪಣೆ ಮೂಲಕವೂ ಗುರುತಿಸಿಕೊಂಡರು. ಒಂದು ವರ್ಷದಿಂದ ನೂರಕ್ಕೂ ಹೆಚ್ಚು ಕಾರ್ಯಕ್ರಮಗಳಿಗೆ ನಿರೂಪಣೆ ಮಾಡಿದ್ದಾರೆ. ಭಾಷೆ, ವಿಷಯದ ಮೇಲಿನ ಹಿಡಿತ ತಮಗೆ ಪ್ಲಸ್ ಪಾಯಿಂಟ್ ಎನ್ನುವುದು ಅವರ ನಂಬಿಕೆ. ಕ್ಯಾಮೆರಾ ಹಿಂದಿನ ಕೆಲಸಗಳಲ್ಲೂ ತೊಡಗಿಸಿಕೊಳ್ಳುವ ಇಚ್ಛೆಯೊಂದಿಗೆ ‘ಮಜಾ ಕೆಫೆ’ ಕಾರ್ಯಕ್ರಮದ ಉಸ್ತುವಾರಿಯಾಗಿ ಕೆಲಸ ಮಾಡಿದ್ದಾರೆ. ಡಿಜಿಟಲ್ ಮೀಡಿಯಾದೆಡೆಗೂ ಆಸಕ್ತಿ ಬೆಳೆಸಿಕೊಂಡಿರುವ ಅವರು ಸ್ಟೋರಿ ಟೈಮ್ಸ್ ಎಂಬ ವೇದಿಕೆಯಲ್ಲಿ ಸಿನಿಮಾ ಕ್ಷೇತ್ರದ ಸಂದರ್ಶನಗಳನ್ನು ಪರಿಚಯಿಸುತ್ತಿದ್ದಾರೆ. ಬದುಕಿಗೆ ಸ್ಫೂರ್ತಿ ತುಂಬುವ ಕಥೆಗಳನ್ನು ಇಂಟರ್‌ವ್ಯೂ ರೂಪದಲ್ಲಿ ಕೊಡುವ ಆಸೆಯೂ ಅಂಕಿತಾ ಅವರಿಗಿದೆ.

ಸದ್ಯ ಬೆಂಗಳೂರಿನ ಆಸುಪಾಸಿನ ಹಳ್ಳಿಯೊಂದರ ಭಕ್ತಿ ಪ್ರಧಾನ ನೈಜಕಥೆಯ ‘ಸಿಂಹರೂಪಿಣಿ’ ಸಿನಿಮಾದಲ್ಲಿ ಕಾಣಿಸಿಕೊಳ್ಳಲು ತಯಾರಿ ನಡೆಸುತ್ತಿದ್ದಾರೆ. ‘ಉತ್ತಮ ಕಲಾವಿದೆ ಎನ್ನಿಸಿಕೊಳ್ಳುವಂಥ ಪಾತ್ರಗಳು ಸಿಕ್ಕರೆ ಖಂಡಿತ ಆ ಅವಕಾಶ ಬಿಡಲಾರೆ’ ಎನ್ನುತ್ತಾರೆ.